ಕರೆದುಕೊಂಡು ಹೋಗುವುದು. ಅವಶ್ಯಕತೆ ಬಿದ್ದರೆ ಅವರಿಗೆ ಆರ್ಥಿಕ ಸಹಾಯ ಒದಗಿಸಿ ತಮ್ಮ ಆತ್ಮೀಯರನ್ನಾಗಿ ಮಾಡಿಕೊಳ್ಳುವುದು

ಮೇಲಿನ ಉದಾಹರಣೆಗಳಿಂದ ನಮಗೆ ಸ್ಪಷ್ಟವಾಗುವುದೇನೆಂದರೆ, ಅನೇಕ ವಿಧಾನಗಳನ್ನು ಅನುಸರಿಸಿ ಚರ್ಚ್ ತನ್ನ ಜನಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ವಿಚಾರ ವಿನಿಮಯ (ಸಂವಾದ ಗೋಷ್ಠಿ) ಗಳು ಕೂಡ ಈ ಕಾರ್ಯದಲ್ಲಿ ಹೆಚ್ಚು ಲಾಭಕರ ಎಂದು ಚರ್ಚ್ ಹೇಳುತ್ತದೆ.

## ಮತಾಂತರಕ್ಕೆ ಅನುಕೂಲ

ಚರ್ಚ್‌ಗಳ ಈ ಸಂವಾದಗೋಷ್ಠಿಗಳಿಗೆ ಧರ್ಮನಿರಪೇಕ್ಷತಾ ವಾದಿಗಳಿಂದ ದೊಡ್ಡ ಬೆಂಬಲ ಸಿಗುತ್ತಿದೆ. ಮಿಶನರಿ ವಿಶೇಷಜ್ಞರು ಹೇಳುವಂತೆ ಇದೂ ಕೂಡ ದೊಡ್ಡಮಟ್ಟದಲ್ಲಿ ಫಸಲನ್ನು ತೆಗೆದುಕೊಳ್ಳಲು ಇರುವ ಅವಕಾಶ. ಜನರನ್ನು ತಲುಪಲು ಸೇವೆ ಕೂಡ ಒಂದು ಉತ್ತಮ ಸಾಧನ. ಈ ಕುರಿತು ಸೂಕ್ಷ್ಮವಾಗಿ ವಿಚಾರ ಮಾಡುವುದು ಅವಶ್ಯಕ. ಈ ವಿಧಾನ ತುಂಬಾ ಪ್ರಾಮಾಣಿಕವಾದ್ದು ಎಂದು ತೋರುತ್ತದೆ. ಪರಸ್ಪರ ಚರ್ಚೆ ಮಾಡುವ ಸಮಯದಲ್ಲಿ ನಿಷ್ಕರ್ಷೆಯೂ ಮುಖ್ಯವಾದ್ದು. ಎರಡೂ ಪಕ್ಷದವರೂ ಪರಸ್ಪರ ಹತ್ತಿರಕ್ಕೆ ಬರುವರು. ಮುಂದಿನ ವಿಷಯದಿಂದ ಈ ಮಿಶನರಿಗಳ ಮೋಸ ನಮಗೆ ಅರಿವಾಗುತ್ತದೆ. 'ಈ ಸಂವಾದಗಳನ್ನು ಪೂರ್ತಿಗೊಳಿಸುವ ಮುನ್ನ ಎಲ್ಲರಿಗೂ ಏಸುವೇ ತಮ್ಮ ರಕ್ಷಕ ಎಂಬ ಭಾವನೆ ಬರುವ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಬೇಕು ಎಂಬ ಮಿಶನರಿಗಳ ತಂತ್ರಗಾರಿಕೆ ಬಹಳ ಅಪಾಯಕಾರಿ' ಚಿಕಿತ್ಸೆಯ ವಿಚಾರದಲ್ಲಿ 'ಮಿಶನ್ ಮ್ಯಾನ್‌ಡೇಟ್' ಎಂಬ ಪುಸ್ತಕದಲ್ಲಿ ಡಾ|| ಹಂಸಯ್ಯ ಜಯಕುಮಾರ ಹೇಳುವ ವಿಚಾರ ಹೀಗಿದೆ 'ಪ್ರತ್ಯೇಕ ಭಾಷೆ ಹಾಗೂ ಜನಜಾತಿಗಳ ಮಧ್ಯೆ ಪ್ರತಿಯೊಬ್ಬರಿಗೂ ಕ್ರಿಸ್ತನ ಸಂದೇಶವನ್ನು ತಲುಪಿಸುವಲ್ಲಿ ಮಿಶನ್ ಆಸ್ಪತ್ರೆಗಳು ಕೆಲಸ ಮಾಡುತ್ತಿವೆ ಮತ್ತು ನಮ್ಮ ದೇಶದ ಸನ್ನಿವೇಶದಲ್ಲಿ ಬೇರೆಯೇ ಯೋಜನೆ ಮಾಡುವುದು ಅವಶ್ಯಕ' ಎಂದು ಹೇಳಿರುವರು.

ಈ ಮೇಲಿನ ಉದಾಹರಣೆಯಿಂದ ಸ್ಪಷ್ಟವಾಗುವುದೇನೆಂದರೆ ಮಿಶನರಿಗಳ ಮಾನವ ಸೇವೆ 'ನೀರಿಗೆ ಆಹಾರ ಹಾಕಿ ಮೀನನ್ನು ಗಾಳಕ್ಕೆ ಸಿಕ್ಕಿಸುವಂತೆ ಇದನ್ನು ನಾವು ಶಿಕಾರಿ ರೂಪದ ಮಿಶನರಿಗಳ ಜಾಲವನ್ನು ತಿಳಿದುಕೊಳ್ಳಬೇಕಿದೆ'. ಈ ಸಂದರ್ಭದಲ್ಲಿ ಲೋಕಮಾನ್ಯ ತಿಲಕರ ಮಾತುಗಳು ನೆನಪಾಗುತ್ತದೆ. 'ನಿಮ್ಮ ಕಣ್ಣ ಮುಂದೆ ನಿಮ್ಮ ಮಕ್ಕಳು ಮರಿಗಳನ್ನು ಮತಾಂತರ ಮಾಡುವುದನ್ನು ನೋಡಿಕೊಂಡು ನೀವು ಶಾಂತವಾಗಿ ಹೇಗೆ ಕುಳಿತುಕೊಳ್ಳುವಿರಿ? ಮೋಸಗೊಳಿಸಿ ಭ್ರಷ್ಟರಾದ ಜನರನ್ನು ಮತ್ತೆ ಪುನಃ ಮಾತೃಧರ್ಮಕ್ಕೆ ಕರೆತರುವ ಉಪಾಯ ನಿಮಗೆ ಹೊಳೆಯುವುದಿಲ್ಲವೇ? ಈ ರೀತಿ ಒಂದೇ ಮುಖವಾಗಿ ಮತಾಂತರಗೊಳ್ಳುತ್ತಿದ್ದರೆ ನೀವು ನಾಶವಾಗುವ ಭಯ ಇದೆ ಎಚ್ಚರ! ಇಷ್ಟೆಲ್ಲಾ ಅವಾಂತರಗಳು ನಡೆಯುತ್ತಿದ್ದರೂ ನೀವು ಮೌನವಾಗಿ ಕುಳಿತಿರುವಿರೆಂದರೆ ನಿಮ್ಮ ಅಭಿಮಾನ ಹಾಗೂ ವಿದ್ವತ್ತು ವ್ಯರ್ಥ'

ಈ ರೀತಿಯ ಪ್ರಶ್ನೆಗಳಿಗೆ ಸ್ಥಾನ-ಸ್ಥಾನಗಳಲ್ಲಿ ನಮ್ಮ ದೂರದೃಷ್ಟಿಯಿಂದ ಮಾರ್ಗಹುಡುಕಬೇಕಾಗಿದೆ. ನಮ್ಮಿಂದ ದೂರಾಗಿರುವ - ಹಾದಿ ತಪ್ಪಿರುವ ಒಬ್ಬೊಬ್ಬರೂ ಪುನಃ ಹಿಂದುಗಳಾಗುವುದಿಲ್ಲವೋ ಅಲ್ಲಿಯವರೆಗೆ ಮಿಶನರಿಗಳ ಮೋಸದ ಆಟಗಳು ನಡೆಯುತ್ತಿರುತ್ತದೆ. ಹಿಂದೂ ಧರ್ಮದಿಂದ ಬೇರ್ಪಟ್ಟಿರುವ ಬಂಧುಗಳನ್ನು ಮತ್ತೆ ನಮ್ಮ ಧರ್ಮಕ್ಕೆ ವಾಪಸ್ಸು ತರುವ ಪ್ರಯತ್ನವನ್ನು ವೇಗಗೊಳಿಸಬೇಕು ಮತ್ತು ಹೊಸಬರಿಗೆ ಹಿಂದು ಧರ್ಮಕ್ಕೆ ಬರುವ - ಅಪ್ಪಿಕೊಳ್ಳುವ ಮಾರ್ಗವನ್ನು ಮುಕ್ತವಾಗಿಡಬೇಕು. ಆಗ ಮಾತ್ರ ಜನಸಂಖ್ಯಾ ಸಂತುಲನವನ್ನು ಕಾಯ್ದುಕೊಳ್ಳಬಹುದು.

**ಅನುವಾದ: ಗ.ರಾ.ಸುರೇಶ್**


# ವಿಕ್ರಮ ಚಂದಾ ಮಾಹಿತಿ




ಆತ್ಮೀಯ ಚಂದಾದಾರರೇ,

ಹೆಚ್ಚು ಜನರಿಗೆ ತಲುಪಬೇಕು ಆ ಮೂಲಕ ರಾಷ್ಟ್ರೀಯ ವಿಚಾರಗಳು ಹೆಚ್ಚು ಹೆಚ್ಚು ಪ್ರಚಾರ ಪಡೆಯಬೇಕು ಎನ್ನುವ ಎಲ್ಲರ ಆಶಯಗಳಿಗೆ ಪೂರಕವಾಗಿ ಹೊಸ ರೂಪ-ಹೊಸ ವಿನ್ಯಾಸದಲ್ಲಿ ವಿಕ್ರಮ ಪ್ರಕಟವಾಗುತ್ತಿದೆ.

ನಿಮ್ಮ ಮೆಚ್ಚಿನ ವಾರಪತ್ರಿಕೆಗೆ ನಿಮ್ಮ ಬಂಧು-ಮಿತ್ರರನ್ನು ಚಂದಾದಾರರನಾಗಿಸುವ ಮೂಲಕ ವಿಕ್ರಮ ಬೆಳವಣಿಗೆಯಲ್ಲಿ ತಾವೆಲ್ಲರೂ ಸಹಕಾರ ನೀಡಬೇಕಾಗಿ ವಿನಂತಿ.

**080-26625526**
**8861209135**
**e-mail: reach@vikrama.in**
**Website: www.vikrama.in**

**ವಾರ್ಷಿಕ : ₹ 750 | ದ್ವೈವಾರ್ಷಿಕ : ₹ 1400**

**ಬ್ಯಾಂಕಿನ ಮೂಲಕ ನಗದು ಪಾವತಿಸುವುದಕ್ಕೆ ಬ್ಯಾಂಕಿನ ವಿವರ**

ಕೆನರಾ ಬ್ಯಾಂಕ್, ಮಲ್ಲೇಶ್ವರಂ 5ನೇ ಅಡ್ಡರಸ್ತೆ ಶಾಖೆ
Current Acct. No.0409201004444
IFSC Code: CNRB 0000409
ಖಾತೆ: ವಿಕ್ರಮ ಕನ್ನಡ ವೀಕ್ಲಿ
(Vikrama Kannada Weekly)

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ನಂ.106, 5ನೇ ಮುಖ್ಯರಸ್ತೆ, ಪಿ.ಬಿ.ನಂ.1804, ಚಾಮರಾಜಪೇಟೆ, ಬೆಂಗಳೂರು-560 018

ಕೆಳಕಂಡ ಆ್ಯಪ್ ಮೂಲಕವೂ ಚಂದಾ ಹಣ ಪಾವತಿಸಬಹುದು
**BHIM APP : 8861209147**
**PAYTM : 8861209147**